**ಸಿ.ಸಿ. ಸಂ. 3850 /2022**
**PW-1**

**<u>ದಿನಾಂಕಃ27.10.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಂದುವರೆದ **<u>ಪಾಟೀ ಸವಾಲು ಆರೋಪಿ ಪರ ಶ್ರೀ. ಹೆಚ್ ಸಿ ಎಸ್ ವಕೀಲರಿಂದಃ-</u>**

ನಾನು 9ನೇ ತರಗತಿಯವರಗೊ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿ 7 ವರ್ಷಗಳಿಂದ ತಮಗೆ ಪರಿಚಿತರೆಂದು ತಾವು ಪಿರ್ಯಾದಿನಲ್ಲಿ ಹೇಳಿದ್ದು ಹೇಗೆ ಪರಿಚಯ ಎಂದರೆ ಸಾಕ್ಷಿಯು 2ನೇ ಆರೋಪಿಯು ಎಲ್ ಐ ಸಿ ಏಜೆಂಟ್ ಹಾಗಾಗಿ ಪರಿಚಯ ಎನ್ನುತ್ತಾರೆ. ತಾವೇನೇದರೂ 2ನೇ ಅರೋಪಿ ಕಡೆಯಿಂದ ಜೀವ ವಿಮಾ ಪಾಲಿಸಿ ಮಾಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಹಾಗಾದರೆ ತಮಗೆ 2ನೇ ಅರೋಪಿಯು ಯಾರಿಂದ ಪರಿಚಯ ಎಂದರೆ ಶಿವರಾಜು ಎಂಬುವವರ ಕಡೆಯಿಂದ ಪರಿಚಯ ಎನ್ನುತ್ತಾರೆ. ನಾನು ಬ್ಯಾಂಕಿನಲ್ಲಿ 6-7 ವರ್ಷಗಳಿಂದ ಬ್ಯಾಂಕ್ ಖಾತೆ ಹೊಂದಿರುತ್ತಾನೆ. ನನಗೆ ತಕ್ಕ ಮಟ್ಟಿಗೆ ಬ್ಯಾಂಕು ವ್ಯವಹಾರ ಗೊತ್ತೆಂದರೆ ಸರಿ. ತಮ್ಮ ಬಳಿ ಎಟಿಎಂ ಕಾರ್ಡ್ ಮತ್ತು ಚೆಕ್ಕು ಪುಸ್ತಕ ಇವೆ ಎಂದರೆ ಸರಿ. ಆರೋಪಿತರಿಗೆ ತಾವು 2 ಲಕ್ಷ ಹಣವನ್ನು ಸಾಲವಾಗಿ ಕೊಟ್ಟೆದ್ದೇನೆ ಎಂದು ಹೇಳಿದ್ದು ಚೆಕ್ ಮೂಲಕ ಅಥವಾ ಬ್ಯಾಂಕ್ ನಿಂದ ಹಣ ವರ್ಗಾವಣೆ ಮಾಡಲು ತಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿದು ಬ್ಯಾಂಕ ನಿಂದ ಹಣವನ್ನು ಡ್ರಾ ಮಾಡಿಕೊಂಡು ಬಂದು ಕೊಟ್ಟಿರುತ್ತೇನೆ ಎನ್ನ್ನುತಾರೆ. ಯಾವ ದಿನಾಂಕದಂದು 2 ಲಕ್ಷ ಹಣವನ್ನು ಬ್ಯಾಂಕ್ ನಿಂದ ಡ್ರಾ ಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯುು ದಿನಾಂಕ ಮರೆತಿದ್ದೇನೆ ಎಂದು ನುಡಿದು ತಿಂಗಳು ಜೂನ್ 2020 ಎನ್ನುತ್ತಾರೆ. ತಾವು ತಮ್ಮ ಬ್ಯಾಂಕ್ ಖಾತೆಯಿಂದ ಜೂನ್ ತಿಂಗಳಲ್ಲಿ 2ಲಕ್ಷ ಹಣ ಡ್ರಾ ಮಾಡಿರುತ್ತೇನೆ ಎಂದು ಹೇಳಿದ್ದು ನಿಮ್ಮ ಖಾತೆಯ ಸ್ಟೇಟ್ ಮೆಂಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತಮಗೇನು ತೊಂದರೆ ಇದೆಯಾ

ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ನುಡಿದು ಮುಂದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಜೂನ್ ತಿಂಗಳಲ್ಲಿ ನಾನು ಖಾತೆ ಹೊಂದಿದ ಇಕ್ವಿಟಾರ್ಸ ಬ್ಯಾಂಕ್ ನಲ್ಲಿ 2 ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ತಮ್ಮನ್ನು ಸಾಲಬೇಕೆಂದು ಯಾವ ಆರೋಪಿ ಕೇಳಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿ ಇಬ್ಬರೂ ಆರೋಪಿತರು ಎನ್ನುತ್ತಾರೆ. ಸಾಲ ಕೇಳಿದ ದಿನವೇ ತಾವು ಪಿರ್ಯಾದಿನಲ್ಲಿ ಹೇಳಿರುವ ಹಾಗೆ ಅರೋಪಿತರಿಗೆ 2 ಲಕ್ಷ ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ನನಗೆ ಸಾಲ ಮಂಜೂರಾದ ನಂತರ ಕೊಡುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರಿಗೆ ಎಷ್ಟು ರೂ ಮುಖ ಬೆಲೆಯ ನೋಟುಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ 2,000 ರೂ ಮುಖ ಬೆಲೆಯ ನೋಟುಗಳನ್ನು ಎನ್ನುತ್ತಾರೆ. 2020ರಲ್ಲಿ ಕೋವಿಡ್ ಸಾಂಕ್ರಾಮಿಕ ಸೋಂಕು ಇದ್ದು, ಜನರು ಓಡಾಡಲು ನಿರ್ಬಂದ ಇತ್ತು ಎಂದರೆ ಸರಿಯಲ್ಲ. ಆರೋಪಿತರಿಗೆ 2ಲಕ್ಷ ಸಾಲದ ಹಣ ನೀಡಿ ತಾವು ಸದರಿ ಹಣವನ್ನು ತಾವು ಆರೋಪಿತರ ಬಳಿ ಹೋಗಿ ಕೇಳಿರುತ್ತೀರಿ ಎಂದು ಹೇಳಿದ್ದು ತಾವು ಯಾವ ದಿನಾಂಕದಂದು ಕೇಳಿದ್ದೀರಿ ಎಂದರೆ ಸಾಕ್ಷಿ ದಿನಾಂಕ ತಿಂಗಳು ನೆನಪಿಲ್ಲ ಎಂದು ಹೇಳಿದ್ದು ನಂತರ ಸ್ವಲ್ಪ ದಿನ ಬಿಟ್ಟು ಎನ್ನುತಾರೆ. ತಮ್ಮ ದೂರಿನಲ್ಲಿ ಯಾವ ದಿನಾಂಕಂದು ಸಾಲದ ಹಣ ಮರುಪಾವತಿ ಮಾಡುವಂತೆ ಕೇಳಿದ್ದೀರಾ ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ-1 ಚೆಕ್ ಅನ್ನು ಯಾರು ಬರೆದುಕೊಟ್ಟಿರುತ್ತಾರೆ ಎಂದು ಹೇಳುವಿರಾ ಎಂದು ಕೇಳಲಾಗಿ ಸಾಕ್ಷಿ 1ನೇ ಆರೋಪಿ ಮಂಜುಳ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ತಮ್ಮ ಎದುರೇ ಚೆಕ್ಕುನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಹೌದು ಎನ್ನುತ್ತಾರೆ. 1ನೇ ಆರೋಪಿ ಮಂಜುಳ ನಿಪಿ-1 ಚೆಕ್ ನಲ್ಲಿ ಬರೆದಿರುವ ಸಹಿಯ ಇಂಕಿಗೂ ಮತ್ತು ಇನ್ನುಳಿದು ಅಕ್ಷರಗಳನ್ನು ಬರೆದಿರುವ ಇಂಕು ವ್ಯತ್ಯಾಸ ಇದೆ ಎಂದರೆ ಸರಿ. ತಾವು ವ್ಯವಸಾಯ ಮಾಡುತ್ತೇನೆ ಎಂದು ಹೇಳಿದ್ದು ಎಷ್ಟು ಎಕರೆ ಜಮೀನು ಇದೆ ಎಂದು ಕೇಳಲಾಗಿ 3 ಎಕರೆ ಎಂದು ಹೇಳುತ್ತಾರೆ. ವ್ಯವಸಾಯದಿಂದ ಬಂದಂತಹ ಹಣದಿಂದ ಅರೋಪಿತರಿಗೆ 2 ಲಕ್ಷ ಹಣವನ್ನು ಕೊಟ್ಟಿರುತ್ತೇನೆಂದು ಈ ಮೊದಲು

ಮಾಡಿದ ಪಾಟೀ ಸವಾಲಿನಲ್ಲಿ ತಾವು ನುಡಿದಿದ್ದು ತಮ್ಮ ಬಳಿ ವ್ಯವಸಾಯದ ಜಮೀನು ಇದೆ ಎಂದು ತೋರಿಸಲು ಪಹಣಿ ಪತ್ರಿಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತಾರೆ. ತಾವು ತಮ್ಮ ಜಮೀನಿನ ಆಧಾರದ ಮೇಲೆ ಬ್ಯಾಂಕ್ ನಿಂದ 2013ನೇ ಇಸವಿಯಿಂದ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿ. ಸದರಿ ಸಾಲವನ್ನು ಇನ್ನು ಸಹ ತೀರುವಳಿ ಮಾಡಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಸರ್ಕಾರದಿಂದ ಸಾಲ ಮನ್ನಾ ಆಗುತ್ತದೆಂದು ಇನ್ನು ತೀರುವಳಿ ಮಾಡಿಲ್ಲ ಎನ್ನುತ್ತಾರೆ. ನನ್ನ ಹೆಂಡತಿಯ ಹೆಸರಿನಲ್ಲಿ ಕಾರು ಇದೆ ಎಂದರೆ ಸರಿ. ಸದರಿ ಕಾರನ್ನು ಸಹ ಸಾಲದ ಕಂತಿನಲ್ಲಿ ಖರೀದಿ ಮಾಡಿದ್ದೇವೆ ಎಂದರೆ ಸರಿ. ಆರೋಪಿತರಿಗೆ ಸ್ವಂತ ಮನೆ ಇದೆ ಎಂದರೆ ಸರಿ. ಆರೋಪಿತರು ಆರ್ಥಿಕವಾಗಿ ಸಧೃಡರಿದ್ದಾರೇ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಆರ್ಥಿಕವಾಗಿ ಸಧೃಡರಿರೋ ಇಲ್ಲವೋ ಎಂದು ತಮಗೆ ಗೊತ್ತಿಲ್ಲದೇ ಇರುವಾಗ ಯಾವ ಆಧಾರದ ಮೇಲೆ ಅವರಿಗೆ 2ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿದ್ದೀರಾ ಎಂದು ಸಾಕ್ಷಿಗೆ ಕೇಳಲಾಗಿ ಪರಿಚಯಸ್ಥರಿದ್ದ ಕಾರಣ ಹಣವನ್ನು ಸಾಲವಾಗಿ ಕೊಟ್ಟಿದ್ದೇನೆ ಎನ್ನುತ್ತಾರೆ. ಆರೋಪಿತರಿಗೆ ನೀಡಿದೆ ಎಂದು ಹೇಳಿದ ನೋಟೀಸ್ ಗೆ ತಾವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಅರೋಪಿತರಿಗೆ ನೀಡಿದ ನೋಟೀಸ್ ತಲುಪಿರುತ್ತದೆಯೋ ಇಲ್ಲವೋ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. 2ನೇ ಆರೋಪಿಯ ತಾಯಿಯ ಹೆಸರಿಗೆ ಇದ್ದ ಜಮೀನು ಮೈಸೂರು ಮತ್ತು ಬೆಂಗಳೂರು ರಸ್ತೆ ಅಗಲೀಕರಣಕ್ಕೆ ಭೂ ಸ್ವಾ ದೀನ ಆಗಿದ್ದರ ಪರಿಣಾಮ ಅವರ ತಾಯಿಯ ಹೆಸರಿಗೆ 30,63,328/- ಹಣ ಜಮಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 2ನೇ ಅರೋಪಿಯು ಬ್ಯಾಂಕ್ 23,50,000/- ಹಣವನ್ನು ಬ್ಯಾಂಕ್ .ನಿಂದ ಸಾಲ ಪಡೆದು ಮನೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ಆರೋಪಿತರು ಆರ್ಥಿಕವಾಗಿ ಸಧೃಡರಿದ್ದು ಸಾಲ ಮಾಡುವ ಪ್ರಮೇಯವೇ ಅವರಿಗೆ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ. ತಮ್ಮ ಸ್ನೇಹಿತ ಶಿವರಾಜು ಕಡೆಯಿಂದ ಆರೋಪಿತರು ಪರಿಚಯ ಎಂದು ತಾವು ಈ ಮೇಲೆ ಹೇಳಿದ್ದು ಸದರಿ ಶಿವರಾಜು ರಿಯಲ್ ಎಸ್ಟೇಟ್ ಎಜೆಂಟ್ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ.

**ಸಿ.ಸಿ. ಸಂ. 3850 /2022**
**PW-1**

ಆರೋಪಿತರು ಶಿವರಾಜು ರವರ ಮುಖಾಂತರ ಬೆಂಗಳೂರಿನ ವಾಸಿ ಕವಿತಾ ರವರಿಗೆ ತಮ್ಮ ಜಮೀನನ್ನು ಆರೋಪಿತರು 13,60,000/- ರೂಗೆ ದಿ.23.06.2022ರಲ್ಲಿ ಮಾರಾಟ ಮಾಡಿದ್ದರೆಂದರೆ ನನಗೆ ಗೊತ್ತಿಲ್ಲ. ಆರೋಪಿತರು ಕವಿತಾ ರವರಿಂದ 5,00,000/- ಹಣ ಪಡೆದು ಇನ್ನುಳಿದ ಬಾಕಿ ಹಣದ ಭದ್ರತೆಗಾಗಿ ಕವಿತಾರವರ ಪರವಾಗಿ ಆರೋಪಿತರಿಗೆ ಈ ಕೇಸಿನ ಚೆಕ್ ಅನ್ನು ಶಿವರಾಜುರವರು ಪಡೆದುಕೊಂಡಿದ್ದರೆಂದರೆ ನನಗೆ ಗೊತ್ತಿಲ್ಲ. ಸದರಿ ಶಿವರಾಜು ಆರೋಪಿತರು ತನಗೆ ನೀಡಿದ್ದ ಚೆಕ್ ಅನ್ನು ನನ್ನ ಮೂಲಕ ಆರೋಪಿತರ ವಿರುದ್ದ ದುರುಪಯೋಗ ಮಾಡಿಕೊಂಡು ಕೇಸು ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಅರೋಪಿತರ ನಡುವೆ ಯಾವುದೇ ನೇರ ನೇರ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನಿಂದ ಯಾವುದೇ ಹಣ ಪಡೆಯದೇ ಇರುವುದರಿಂದ ಅವರು ನನಗೆ ಕೇಸಿನಲ್ಲಿ ನಮೂದು ಮಾಡಿರುವ ಹಣವನ್ನು ಕೊಡುವ ಬಾಧ್ಯತೆ ಅವರಿಗೆ ಇಲ್ಲ ಎಂದರೆ ಸರಿಯಲ್ಲ. ಅರೋಪಿತರು ಶಿವರಾಜುವರಿಗೆ ಭದ್ರತೆಗಾಗಿ ನೀಡದ ಖಾಲಿ ಚೆಕ್ ಅನ್ನು ನಾನು ಅವರಿಂದ ಪಡೆದು ನಾನೇ ಕೇಸನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ